Message from the Chairman, Legislative Council

(Announcement)

Mr. DEPUTY SPEAKER.—There is a message from the Legislative Council which reads as follows:

"Mr. Speaker,

As required by rule 91 of the Rules of Procedure and Conduct of Business in the Mysore Legislative Council, I transmit the Mysore Civil Courts (Amendment) Bill, 1969 for concurrence of the Legislative Assembly. The Bill was passed by the Legislative Council on 3rd September 1969."

There is another message which reads thus :

"Mr. Speaker,

As required by rule 91 of the Rules of Procedure and Conduct of Business in the Mysore Legislative Council, I transmit the Mysore Shops and Commerical Establishments (Amendment) Bill, 1969 for concurrence of the Legislative Assembly. The Bill was passed by the Legislative Council on 3rd September 1969."

Papers laid on the Table

SECRETARY.—I lay on the Table of the House:

1. The Mysore Shops and Commercial Establishment (Amendment) Bill, 1969 as passed by the Legislative Council.

2. The Mysore Civil Courts (Amendment) Bill, 1969 as passed by the Legislative Council."

Question of Privilege *re*: Contradictory Statements made by Deputy Minister for Public Works during Question Hour

Sri A. R PANCHAGAVI.—Before proceeding with the business of the House, I wish to bring to the notice of the Chair certain serious irregularities and certain contradictory statements made during the Question Hour. This arose out of the question No. 556 put by Sri Gurreddy. The Hon. Deputy Minister for P.W.D. while answering the question has stated that he has not only travelled along that road, but he actually went to the House of Sri Gurreddy and took meals there. But Sri Reddy said that he never visited his House. If such things are stated in the House, will it not be considered that the House is treated so lightly ? This is a serious thing that has taken place in the House.

Sri S. SIVAPPA.—I support what Sri Panchagavi has stated.

Mr. DEPUTY SPEAKER.—I request the hon. Member to give it in writing.

Sri K. H. PATIL.—It is a fit case to be dealt with.

Mr. DEPUTY SPEAKER.—I have to look into the proceedings of the House.

Sri K. H. PATIL.—When he has brought to the notice of the Chair. it is the right time that the matter should be dealt with. At the right time Sri Panchagavi has brought this to the notice of the House. There is no use of asking the member to give it in writing.

† ಶ್ರೀ ಹೆಚ್. ಎನ್. ನಂಜೇಗೌಡ.—ಸ್ವಾಮಿ, ಹಕ್ಕಿನ ಚ್ಯುತಿ ಆಗಿದೆ ಎಂದು ಬರೆವಣಿಗೆಯ ಮುಖಾಂತರ ಕೊಡಬೇಕಾದರೆ ಈ ಸಭೆ ನಡೆಯುವುದಕ್ಕಿಂತ ಮುಂಚಿತವಾಗಿ ಕೊಡಬೇಕೇ; ಯಾವಾಗ ಕೊಡಬೇಕು ಎನ್ನುವುದನ್ನು ಈ ಸಭೆಯಲ್ಲಿ ಮಾನ್ಯ ಸಭಾಧ್ಯಕ್ಷರು ತಿಳಿಸಿದರೇ? ಈ ವಿಚಾರ ಏತಕ್ಕೆ ಹೇಳುತ್ತೇನೆ ಎಂದರೆ ಹೊರಗಡೆ ಯಾವುದಾದರೂ ಚ್ಯುತಿ ಬಂದರೆ ಈ ಸಭೆಗೆ ಸಂಬಂಧಪಟ್ಟದ್ದೋ ಆಗಲಿ ಅಥವಾ ಸದಸ್ಯರ ಹಕ್ಕಿಗೆ ಸಂಬಂಧಪಟ್ಟದ್ದೋ ಆಗಲಿ ಅಂಥಾದ್ದನ್ನು ಈ ಸಭೆಯ ಗಮನಕ್ಕೆ ತರಬೇಕಾದರೆ ಬರವಣಿಗೆ ಮುಖಾಂತರ ಈ ಸಭೆ ನಡೆಯುವುದಕ್ಕಿಂತ 2 ಗಂಟೆ ಮುಂಚಿತವಾಗಿ ಕೊಡಬೇಕು. ಆದರೆ ಈ ಸಭೆಯಲ್ಲಿ ಒಂದು ಹಕ್ಕಿಗೆ ಲೋಪ ತಂದು ಈ ಸಭೆಯನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಮುಂತ್ರಿಗಳು ತೊಡಗಿದ ಕಾಲದಲ್ಲಿ ಹಕ್ಕಿಗೆ ಚ್ಯುತಿ ಉಂಟಾಗುವಾಗ ಅಂತಹ ಸಂದರ್ಭದಲ್ಲೂ ಈ ಸಭೆಯ ಗಮನಕ್ಕೂ ಮತ್ತು ಅಧ್ಯಕ್ಷರ ಗಮನಕ್ಕೂ ತಂದರೆ ಆದರ ಮೇಲೆ ಚರ್ಚೆ ಪ್ರಾರಂಭ ಮಾಡಲಿ, ಇಲ್ಲವೇ ಅಧ್ಯಕ್ಷರ ಪ್ರಿವಿಲೇಜ್ ಸಮಿತಿಗೆ ಕಳುಹಿಸಿಲಿ ಎಂದು ಹೇಳುವುದಕ್ಕೆ ಬರುತ್ತದೆ. ಶ್ರೀಮಾನ್ ಪಂಚಗಾವಿಯವರು ಪ್ರಾಮುಖ್ಯವಾದಂಥ ವಿಷಯವನ್ನು ತಿಳಿಸಿದ್ದಾರೆ. ಈ ಸಭೆಯನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನವನ್ನು ಮಾನ್ಯ ಉಪಮಂತ್ರಿಗಳು ಮಾಡಿದ್ದಾರೆ ಎಂದು. ಅದೂ ಅಲ್ಲದೆ ಅವರು ಅಧ್ಯಕ್ಷರ ಪೀಠವಲ್ಲಿ ಇದ್ದುಕೊಂಡು ಇದರ ಅನುಭವ ಗಳನ್ನೂ ತಿಳಿದುಕೊಂಡು ಮತ್ತು ಈ ಸಭೆಯ ನಿಯಮಾವಳಿಗಳನ್ನೂ ಅರಿತು ಇಂತಹ ಒಂದು ಸೂಚನೆಯನ್ನು ಈ ಸಭೆಯ ಗಮನಕ್ಕೆ ತಂದಿವ್ವಾರೆ. ಇದನ್ನು ಅಷ್ಟು ಸುಲಭವಾಗಿ ಪರಿಗಣಿಸ ಬಾರದು ಎಂದು ಹೇಳುತ್ತೇನೆ. ಆದುದರಿಂದ ತಮಗೆ ಅರಿಕೆ ಮಾಡಿಕೊಳ್ಳುವುದು ಏನೆಂದರೆ ಈ ಒಂದು ಸಭೆಯನ್ನು ತಪ್ಪುದಾರಿಗೆ ಎಳೆಯುವ ಒಂದು ಪ್ರಯತ್ನವನ್ನು ಮಾಡಿ ಈ ಸಭೆಯ ಹಕ್ಕಿಗೆ ಚ್ಯುತಿ ತಂದಿರತಕ್ಕ ಮಾನ್ಯ ಉಪಮಂತ್ರಿಗಳ ವಿರುದ್ಧವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಪಂಚಗಾವಿಯವರು ಒಂದು ಸೂಚನೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ರೀತಿ ಈ ಸಭೆಯ ಹಕ್ಕಿಗೆ ಚ್ಯುತಿ ಬಂದಿರುವುದರಿಂದ ಇದನ್ನು ಈ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು ಇಲ್ಲವೇ ಪ್ರಿವಿಲೇಜ್ ಸಮಿತಿಗೆ ಕಳುಹಿಸುವುದಾದರೆ ನಮ್ಮದು ಏನೂ ಅಭ್ಯಂತರವಿಲ್ಲ: ಇಲ್ಲವಿದ್ದರೆ ಇದರ ಚರ್ಚೆಗೆ ತಕ್ಷಣ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ.—ಸ್ವಾಮಿ, ಈಗ ಶ್ರೀಮಾನ್ ಗುರಡ್ಡಿಯವರು ಮತ್ತು ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಪಂಚಗಾವಿಯವರು ಹೇಳಿದ ವಿಷಯವನ್ನು ನಾವು ಅಷ್ಟೊಂದು ಲಘುವಾಗಿ ತೆಗೆದುಕೊಳ್ಳಲು ಒಳ್ಳೆಯದಲ್ಲ ಎಂದು ನನ್ನ ಭಾವನೆ. ಈ ಸಭೆಯಲ್ಲಿ ಮಾತನಾಡ ಬೇಕಾದರೆ ಅಥವಾ ಈ ಸಭೆಯಲ್ಲಿ ಏನಾದರೂ ವಿಷಯಗಳನ್ನು ಪ್ರತಿಪಾದಿಸಬೇಕಾದರೆ ಬಹಳ ಜವಾಬ್ದಾರಿಯಿಂದ ಹೇಳಬೇಕು. ಆದನ್ನು ಜವಾಬ್ದಾರಿಯಿಂದ ಹೇಳದೇ ಹೋದರೆ ಅದರ ಪರಿ ಣಾಮ ದೇಶದಲ್ಲಿ ಏನಾಗುತ್ತದೆ ಎನ್ನುವುದನ್ನು ನೋಡಬೇಕು. ಶ್ರೀಮಾನ್ ಗುರಡ್ಡಿಯವರು ಸ್ಪಷ್ಟವಾಗಿ ಅನುಮಾನಕ್ಕೆ ಆಸ್ಪದವಿಲ್ಲದೆ ಹೇಳಿವ್ವಾರೆ; ನಮ್ಮ ಮನೆಗೆ ಬಂದಿಲ್ಲ, ನಮ್ಮ ಮನೆ ಯಲ್ಲಿ ಊಟ ಮಾಡಿಲ್ಲ; ಈ ರಸ್ತೆಯಲ್ಲೂ ಸಹ ಬಂದಿಲ್ಲ ಎಂದು ಅವರು ಹೇಳಿವ್ವಾಗ ಉಪಮಂತ್ರಿ ಗಳು ಇನ್ನು ಎಷ್ಟು ದೂರ ಹೋಗಬಲ್ಲರು! ಆದರೆ ಇಂತಹ ಪ್ರಶ್ನೆ ಬಂದಾಗ ಜವಾಬ್ದಾರಿ ತಾವು ವಹಿಸಬೇಕು. ಇಲ್ಲ ಯಾವ ಪಾರ್ಟಿ ಪಂಗತ ಮಾಡುವುದಲ್ಲ. ಈ ಮಾನ್ಯ ಸಭೆಯಲ್ಲಿ ನತ್ಯಕ್ಕೆ ದೂರವಾದ ವಿಷಯಗಳನ್ನು ಅಷ್ಟೊಂದು ಲಘುವಾಗಿ ಹೇಳಿದರು. ನೋಡಿ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಗೋಪಾಲಗೌಡರು ಹುಡುಗರನ್ನು ಮಾತನಾಡುವುದಕ್ಕೆ ಹಚ್ಚಿಬಿಟ್ಟರೆ ಬಾಯಿಬಂದಹಾಗೆ ಆಡುತ್ತಾರೆ ಎಂದು ಮಾತನಾಡಿದಾಗ ಶ್ರೀಮಾನ್ ಪುಟ್ಟಸ್ವಾಮಿಯವರು ಒಂದು ಆಕ್ಷೇಪವನ್ನು ತೆಗೆದುಕೊಂಡರು.

(ಶ್ರೀ ಎಚ್. ಸಿದ್ದವೀರಪ್ಪ)

3-00 P. M.

ಶ್ರೀಮಾನ್ ಗೋಪಾಲ ಗೌಡರು ಅವರ ಇಂಗಿತವನ್ನು ಅರಿತು ವಾಪಸು ತೆಗೆದುಕೊಂಡಿದ್ದೇನೆ ಎಂದು ಹೇಳಿದರು. ಆದರೆ ಅವರು ಹೇಳಿದ್ದು ಸರಿಯಾಗಿತ್ತು ಎಂದು ನನ್ನ ಅಭಿಪ್ರಾಯ. ಅದು ಅನ್‌ಪಾರ್ಲಮೆಂಟರಿಯಾದುದರಿಂದ ವಾಪಸು ತೆಗೆದುಕೊಳ್ಳಬೇಕಾಯಿತು, ವಾಪಸು ತೆಗೆದುಕೊಂಡಿದ್ದಾರೆ. ಶ್ರೀಮಾನ್ ಹಂಡಗಾವಿ ಅವರು ಮತ್ತು ಶ್ರೀಮಾನ್ ಗುರೆಡ್ಡಿ ಅವರು ಏನು ಹೇಳಿದ್ದಾರೆ ಅದನ್ನು ಇಡೀ ಮಾನ್ಯ ಸಭೆ ಕೇಳಿದೆ, ತಾವೂ ಕೇಳಿದ್ದೀರಿ. ಆದುದರಿಂದ ಬರೆದುಕೊಡುವ ಪ್ರಶ್ನೆ ಬರುವುದಿಲ್ಲ. ಅದು ಪ್ರಿವಿಲೇಜ್ ಮೋಷನ್ ಆಗುತ್ತದೆಯೇ ಇಲ್ಲವೇ ? ಬೇಕಾದರೆ ಉಪಮಂತ್ರಿಗಳನ್ನು ಕರೆಸಿ ನೀವು ಹೀಗೆ ಹೇಳಿದಿರಿ, ಅವರು ಹಾಗೆ ಹೇಳುತ್ತಾರೆ ಎಂದು ಕೇಳಿ. ಅದಕ್ಕೆ ಅವರು ನಾನು ಅಲ್ಲಿಗೆ ಹೋಗಿ ಬಂದು ಊಟ ಮಾಡಿದ್ದು ನಿಜ ಎನ್ನುವುದಾದರೆ ಪ್ರಿವಿಲೆಜ್ ಕಮಿಟಿಗೆ ಹೋಗಲೇ ಬೇಕಾಗುತ್ತದೆ. ಏತಕ್ಕೋಸ್ಕರ ಹೇಳುತ್ತೇನೆಂದರೆ, ಇಂಥದ್ದು ಪ್ರತಿ ದಿವಸ, ಪ್ರತಿ ನಿತ್ಯ ನಮ್ಮ ಅನುಭವದಲ್ಲಿ ನಡೆಯುತ್ತಿರುವ ವಿಚಾರಗಳು. ಸಾಮಾನ್ಯವಾಗಿ ಹೇಳಬೇಕಾದರೆ ಲಘುವಾಗಿ, ತಮಾಷೆಯಾಗಿ ಹೇಳುವುದು ಬೇರೆ ಇರುತ್ತದೆ ; ಟೈಟರ್ ವೈನ್ ಎಂದು ಹೇಳುತ್ತಾರಲ್ಲ ಹಾಗೆ. ಉಡಾಫೆ ಮಾಡಿ ಹೇಳುವುದು ಸರಿಯಿಲ್ಲ. ದಯವಿಟ್ಟು ಇದನ್ನು ಪ್ರಿವಿಲೆಜ್ ಕಮಿಟಿಗೆ ಕಳಿಸಿಕೊಡಿ, ಅಲ್ಲಿ ವಿಚಾರಣೆಯಾಗಿ ಬರಲಿ.

†ಶ್ರೀ ಎಚ್. ಎಂ. ಚನ್ನಬಸಪ್ಪ.—ರೂಲ್ 180ರ ಪ್ರಾವಿಸೋದಲ್ಲಿ ಹೇಳಿರುವ ಪ್ರಕಾರ ತಮಗೆ ಅಧಿಕಾರವಿದೆ. ಯಾವ ಘಳಿಗೆಯಲ್ಲಿ ಬೇಕಾದರೂ ಕೂಡ ಪ್ರಿವಿಲೇಜ್ ಪ್ರಶ್ನೆಯನ್ನು ಪರಿಶೀಲನೆ ಮಾಡುವುದಕ್ಕೆ ತಮಗೆ ಅಧಿಕಾರವಿಲ್ಲ ಎನ್ನುವ ಪ್ರಶ್ನೆ ಇಲ್ಲ. ಆಪದ್ಧ, ಅಪ್ರಮಾಣಿಕತೆಯಿಂದ ಕೂಡಿದ ಹೇಳಿಕೆಯನ್ನು ಕೊಡತಕ್ಕುದ್ದು ನುಮಾರು 9 ವರ್ಷಗಳಿಂದಲೂ ಕೂಡ ಈ ಸರ್ಕಾರಕ್ಕೂ ಮತ್ತು ಹಿಂದಿನ ಸರ್ಕಾರಕ್ಕೂ ಅನೂಚಾನವಾಗಿ ಬಂದ ಪದ್ಧತಿಯಾಗಿದೆ. ಅನೇಕವೇಳೆ ಅಪ್ರಮಾಣಿಕತೆಯಿಂದ ಕೂಡಿದ ಅಪದ್ಧವನ್ನು ನುಡಿದಂಥ ಸನ್ನಿವೇಶಗಳನ್ನು ಎತ್ತಿ ಎತ್ತಿ ತೋರಿಸಿದ್ದೇನೆ; ಅಂಕ ಅಂಶಗಳನ್ನು ಎತ್ತಿ ಅವರು ಹೇಳಿದುದನ್ನು ಒತ್ತಿ ಹೇಳಿದ್ದೇನೆ. ತಮ್ಮ ಕಡೆಗೆ ಒಂದು ಪುಸ್ತಕವನ್ನೇ ಕೊಚ್ಚೆ. ಹಾಗೂ ತಾವು ಕ್ರಮ ತೆಗೆದುಕೊಳ್ಳಲಿಲ್ಲ. ಎಷ್ಟು ಆಪದ್ಧ ಹೇಳಿದರೂ ಕೂಡ ಬಚಾಯಿಸಿಕೊಳ್ಳಬಹುದು ಎನ್ನುವ ಧೈರ್ಯ ಅವರಿಗೆ ಇದೆ. ಗೋದಾವರಿ-ಕೃಷ್ಣ ನೀರಿನ ವಿಷಯ ಚರ್ಚೆಗೆ ಬಂದಾಗ ಅಪದ್ಧಗಳ ಸುರಿಮಳೆಯನ್ನೇ ತಮ್ಮ ಮುಂದೆ ಇಡುತ್ತೇನೆ. ಅದರ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಶ್ರೀಮಾನ್ ಮಾಗಾವಿ ಅವರು ಅತುರದಲ್ಲಿ ಹೇಳಿದರೋ, ಉತ್ಸಾಹದಲ್ಲಿ ಹೇಳಿದರೋ ಗೊತ್ತಿಲ್ಲ. ಒಂದೇ ಒಂದು ಸುಳ್ಳು ಮಾತು ಹೇಳಿದ್ದರಿಂದ ರಾಡ್ರ್ಯ ಪ್ಪೊಪೂಮ ಅದೇ ಘಳಿಗೆಯಲ್ಲಿ ರಾಜೀನಾಮೆಯನ್ನು ಕೊಟ್ಟು ಹೋಗಬೇಕಾಯಿತು, ಸರ್ಕಾರವೂ ಕೂಡ ಹೋಗಬೇಕಾಯಿತು. ಆದ ಕಾರಣ ಪ್ರಜಾಪ್ರಭುತ್ವ ಬದುಕಿರಬೇಕಾದರೆ, ಪ್ರಜಾಪ್ರಭುತ್ವವನ್ನು ಪಾಲಿಸಬೇಕಾದರೆ, ಈ ಪ್ರಸಂಗವನ್ನು ನಿರ್ದಾಕ್ಷಣ್ಯವಾಗಿ ನಾವು ವಿಚಾರ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕಾದ್ದು ಅವಶ್ಯ ಮತ್ತು ಬಹಳ ಪ್ರಾಮುಖ್ಯ. ಆದ್ದರಿಂದ ಪ್ರಿವಿಲೇಜ್ ಪ್ರಶ್ನೆಯನ್ನು ಈಗಲೇ ಪರಿಶೀಲನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

†ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಮುದ್ದೇಬಿಹಾಳ ಕ್ಷೇತ್ರದ ಸದಸ್ಯರು ಕೇಳಿದಂಥ ಪ್ರಶ್ನೆಗೆ ಉತ್ತರ ಮಾನ್ಯ ಲಕ್ಕಪ್ಪನವರ ಹೆಸರಿನಲ್ಲಿ ಆಚ್ಚಾಗಿದೆ. ತಾವು ಸಭೆಯ ಅಧ್ಯಕ್ಷತೆ ವಹಿಸಿ, ಉತ್ತರ ಕೊಟ್ಟಂಥ ಉಪಮಂತ್ರಿಗಳು ಏನೇನನ್ನು ಹೇಳಿದ್ದಾರೆ ಎನ್ನುವುದನ್ನು ತಾವು ಕೇಳಿದ್ದೀರಿ. ಇದು ಸಭೆ. ನಮ್ಮಲ್ಲಿ ಬಹಳ ಸಲ ಹಕ್ಕು ಬಾಧ್ಯತೆಗಳ್ಚ್ಯುತಿ ಬಂದಿದೆ ಎಂದು ತಾವು ಶಿಕ್ಷೆ ಕೊಡುತ್ತಿದ್ದೀರಿ, ಕೊಟ್ಟಿದ್ದೀರಿ. ಅಧ್ಯಕ್ಷರು ಕೊಡಬೇಕು, ಶಿರಬಾಗಿ ಅದನ್ನು ನಾವು ಪಾಲನೆ ಮಾಡಬೇಕು. ಇದು ಸಭೆಯ ಘನತೆ-ಗೌರವಗಳಿಗೆ ಸಂಬಂಧಪಟ್ಟಿದೆ. ಈ ದಿವಸ ಕನ್ನಡದ ಪ್ರಶ್ನೋತ್ತರಗಳ ಪಟ್ಟಿ ನನ್ನಲ್ಲಿದೆ. ತಮ್ಮ ಕಣ್ಣುಮುಂದೆ ಇದು ನಡೆದಿದೆ, ಕ್ಯಾಬಿನೆಟ್ ಮಿನಿಸ್ಟರ ಹೆಸರು ಉತ್ತರದ ಪಟ್ಟಿಯಲ್ಲಿ ಮುದ್ರಿಸಲಾಗಿದೆ. ಉತ್ತರಕೊಡಲು ಜವಾಬ್ದಾರಿ ಇರಬಹುದು. ಉಪ ಸಚಿವರು ಉತ್ತರ ಕೊಡುತ್ತಿದ್ದಾರೆ. ನಮ್ಮ ಸಭೆಯಲ್ಲಿ ಆ ಬಗ್ಗೆ ಇದುವರೆಗೆ ಪ್ರಶ್ನೆ ಮಾಡಿಲ್ಲ. ನಾವು ಕೊಟ್ಟ ಉತ್ತರಗಳನ್ನು ಯಾರೇ ಕೂಡಲಿ ಒಪ್ಪಿಕೊಳ್ಳುತ್ತಿದ್ದೇವೆ. ಪಾರ್ಲಮೆಂಟಿನಲ್ಲಿ ಸಾಮಾನ್ಯವಾಗಿ ಹುಡುಗರು ಎಂಬ ಶಬ್ದವನ್ನು ಪಯೋಗಿಸುತ್ತಾರೆ. ಇಂಗ್ಲೀಷಿನಲ್ಲಿ ಬಾಯ್ಸ್ ಎಂದು ಕರೆಯಬಹುದು, ಬಾಯ್ಸ್ ಇನ್ ದಿ ಮಿನಿಸ್ಟ್ರಿ ಎಂದು ಹೇಳಬಹುದು. ಅದನ್ನು ವಾಪಸು ತೆಗೆದುಕೊಂಡಿದ್ದಾರೆ. ಇದೇ ರೀತಿಯಲ್ಲಿ ಕನ್ನಡದಲ್ಲಿ ಬಾಯಿಗೆ ಬಂದಹಾಗೆ ಎಂದು ಹೇಳುವುದುಂಟು. ಅದನ್ನು ಇಂಗ್ಲೀಷಿಗೆ ತರ್ಜುಮೆ ಮಾಡಿದರೆ ಪಾರ್ಲಮೆಂಟರಿಯಾಗುತ್ತದೆಯೇ ! ಅದೇನೇ ಇರಲಿ, ಈ ವಿಷಯದ ಬಗ್ಗೆ ಮಾತನಾಡುವುದಿಲ್ಲ.

ಈಗ ಗಮನಕ್ಕೆ ತರಬೇಕಾಗಿರುವುದು ಮಾನ್ಯ ಸಿದ್ದವೀರಪ್ಪನವರು, ಚನ್ನಬಸಪ್ಪನವರು ಹೇಳಿದ್ದಾರೆ. ಶ್ರೀ ಪಂಚಗಾವಿಯವರು ಈ ಸಭೆಯ ಉಪಾಧ್ಯಕ್ಷರಾಗಿದ್ದರು. ಈ ಹಕ್ಕುಭಾದ್ಯತೆ ಪ್ರಶ್ನೆ ಬಂದಿರುವಾಗ ನಾನು ಪ್ರೊಪ್ಯೂಮಾ ಕೇಸಿನತನಕ ಹೋಗುವುದಿಲ್ಲ, ಇಂಗ್ಲೆಂಡಿನಲ್ಲಿ ಅಸತ್ಯ ಹೇಳಿ ರಾಜೀನಾಮೆ ಕೊಟ್ಟಿರುವ ವಿಚಾರಕ್ಕೆ ನಾನು ಹೋಗುವುದಿಲ್ಲ. ನನ್ನಲ್ಲಿ ಕನ್ನಡ ಮತ್ತು ಇಂಗ್ಲೀಷಿನ ಪ್ರಶ್ನೋತ್ತರಗಳ ಪಟ್ಟಿ ಎರಡೂ ಇವೆ. ಕನ್ನಡದಲ್ಲಿ ಪ್ರಶ್ನೆ ಈ ರೀತಿ ಇದೆ. ''ತಾಳೆ ಕೋಚೆ-ಹೂವಿನ ಹಪ್ಪರಗಿ ರಸ್ತೆಯನ್ನು ಎಂದಿನಿಂದ ದುರಸ್ತು ಮಾಡಿರುವುದಿಲ್ಲ.'' ಇಂಗ್ಲೀಷಿನಲ್ಲಿ ರಿಪೇರ್ ಎಂಬ ಶಬ್ದವನ್ನು ಉಪಯೋಗಿಸಿದ್ದಾರೆ. ಮೈನ್‌ಟಿನೆನ್ಸ್ ಬೇರೆ, ರಿಪೇರಿ ಬೇರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಬಜೆಟ್ಟಿನಲ್ಲಿ ಹಣ ಒದಗಿಸಲಾಗಿತ್ತೇ ಎಂದು ಕೇಳಿರುವುದಕ್ಕೆ ಒದಗಿಸಲಾಗಿದೆ. ನಿಜ ಎಂದು ಒಂದು ಕಡೆ ಹೇಳಿದ್ದಾರೆ. ಪ್ರತಿ ವರ್ಷ ದುರಸ್ತಿ ಮಾಡಿದ್ದೇವೆ ಎಂದು ಒಂದು ಕಡೆ ಹೇಳಿವ್ವಾರೆ. ಇದಕ್ಕೆ ಎಷ್ಟು ಹಣ ಖರ್ಚುಮಾಡಲಾಗಿದೆ. ಕಂಟ್ರಾಕ್ಟರು ಯಾರು, ಏನು ಎಂಬ ವಿವರ ಯಾವುದೂ ಸಭೆಗೆ ಗೊತ್ತಿಲ್ಲ. ಅಲ್ಲ ಏನೂ ರಿಪೇರಿ, ದುರಸ್ತಿ ಆಗುತ್ತಿಲ್ಲ ರಸ್ತೆ ಬಹಳ ಕೆಟ್ಟಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಸದಸ್ಯರೊಬ್ಬರು 20 ಮೈಲಿಗಳ ಮೇಲೆ ಆ ರಸ್ತೆಯಲ್ಲಿ ಹೋಗುವುದೇ ಕಷ್ಟ ಎಂದು ಹೇಳಿದಾಗ ಮಂತ್ರಿಗಳು ತಮಾಷೆಯಾಗಿ ಉತ್ತರ ಕೊಟ್ಟರು. ನನಗೆ ಸರಿಯಾಗಿ ಕೇಳಿಸಲಿಲ್ಲ. ಅದು ರಿಕಾರ್ಡಿನಲ್ಲಿದೆ, ನೋಡಿ. ಆಮೇಲೆ ಮೈನ್ ಟಿನೆನ್ಸ್ ಎಂಬುದೇ ದುರಸ್ತಿ ಎಂದು ಹೇಳುವುದಾದರೆ.....

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈನ್‌ಟಿನೆನ್ಸ್ ಎಂದರೆ ಸಾರಾಬಾದು, ರಿಪೇರಿ ಎಂದರೆ ದುರಸ್ತಿ.

ಶ್ರೀ ಎಸ್. ಗೋಪಾಲಗೌಡ.—ಎರಡ್ಲೂ ರಸ್ತೆಗಳಿಗೂ ಮೈನ್‌ಟಿನೆನ್ಸ್ ಎಂದು ಮಂತ್ರಿಗಳು ಹೋಗುವಾಗ ಮಣ್ಣು ತೂರುತ್ತಾರೆ, ಅದನ್ನು ದುರಸ್ತಿ ಎಂದು ಹೇಳುವುದಿಲ್ಲ. ಒಂದು ಸೇತುವೆಗೆ ಜಖಂ ಆಗಿದ್ದರೆ, ಅಥವ ರಸ್ತೆ ಕೊರೆದುಹೋಗಿದ್ದರೆ ದುರಸ್ತಿ ಮಾಡಬೇಕು. ಬರೀ ಮೈನ್ ಟಿನೆನ್ಸ್ ಪ್ರಶ್ನೆಯಾದರೆ 4 ಲಕ್ಷ 50 ಸಾವಿರ ರೂಪಾಯಿ ಅಂದಾಜು ಮಾಡುವ ಅವಶ್ಯಕತೆಯೇ ಬರುವುದಿಲ್ಲ, ಅದು ದುರಸ್ತಿನಲ್ಲಿ ಬರುತ್ತದೆ, ಇದರ ಜೊತೆಗೆ ಅವರು ಹೇಳಿದ್ದಾರೆ: ಈ ಅಂದಾಜು ಮಾಡಿದ ಪ್ರಕಾರ ಏನು ಹಣ ಒದಗಿಸಿದ್ದೇವೆ ಅದು ಸಾಲದು ಅಂತ ಕಂಡುಬಂದದ್ದರಿಂದ ಮತ್ತೆ ಪುನಃ ರೀ ಎಸ್ಟಿಮೇಟ್ ಮಾಡುತ್ತೇವೆ. 5 ಲಕ್ಷ ಚಿಲ್ಲರೆ ರೂಪಾಯಿ ಆಗುತ್ತದೆ ಎಂದು ಹೇಳಿದ್ದಾರೆ. ಒಂದಕ್ಕೊಂದು ಸಂಬಂಧವಿಲ್ಲದೇ ಇರತಕ್ಕ ಸತ್ಯವನ್ನು ಮರೆಮಾಚತಕ್ಕ, ಈ ಪ್ರಶ್ನೆಯನ್ನು ಕೇಳಿದ ಸದಸ್ಯರನ್ನು ಅವಮಾನಿಸತಕ್ಕಂಥ, ತಪ್ಪು ದಾರಿಗೆ ಎಳೆಯತಕ್ಕ, ಈ ಎರ್ಡ್ಲಾ ಕೆಲಸಗಳನ್ನೂ ಈ ಅಚ್ಚು ಮಾಡಿದ ಉತ್ತರದಲ್ಲಿ ಸರ್ಕಾರದವರು ಕೊಟ್ಟಿದ್ದಾರೆ. ಇದಕ್ಕಿಂತ ಲಘುವಾಗಿ ಈ ಪ್ರಶ್ನೆಗೆ ಉಪ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ ಎಂದು ನಾನು ಭಾವಿಸುತ್ತೇನೆ. ಈ ಮನೆಯಲ್ಲಿ ಸತ್ಯವಲ್ಲದ, ಗೊತ್ತಿಲ್ಲದೇ ಇರತಕ್ಕ ವಿಷಯಗಳನ್ನು ಹೇಳಬಾರದು, ಪ್ರಾಮಾಣಿಕವಾಗಿರುವ, ಸತ್ಯವಾದ ವಿಷಯಗಳನ್ನು ಹೇಳಬೇಕು, ತಿಳಿದುಕೊಂಡು ಹೇಳಬೇಕು. ಶ್ರೀಮಾನ್ ಸಿದ್ದವೀರಪ್ಪನವರು ಉಡಾಫೆ ಎಂಬ ಪದವನ್ನು ಹೇಳಿದರು. ನಾನು ಉಡಾಫೆ ಅಂತ ಹೇಳುವುದಿಲ್ಲ. ಜವಾಬ್ದಾರಿ ರಹಿತವಾಗಿ ಮಾತನಾಡುವುದು ಏನಿದೆ ಇದು ಬಹಿರಂಗ ಸಭೆಗಳಲ್ಲ, ಚುನಾವಣಿಗಳಲ್ಲ ಅಥವಾ ಯಾವುದಾದರೂ ಕಡೆಯಲ್ಲಿ ಎಲ್ಲರೂ ಸೇರಿಕೊಂಡು ಹರಟೆ ಹೊಡೆಯುವ ಕಾಲದಲ್ಲಿ ಅದೂ ಇದೂ, ಏನೋ ಅಂತೆ ಕಂತೆ ಹೇಳಬಹುದೇ ಹೊರತು ರೆಕಾರ್ಡ್‌ನಲ್ಲಿ ಹೋಗುವಂತಹ ವಿಷಯಗಳ ಬಗ್ಗೆ ಈ ತರಹ ಲಘುವಾಗಿ ಉತ್ತರ ಕೊಡಬಾರದು. ಈ ವಿಷಯವನ್ನು ತಾವು ಸಮಗ್ರವಾಗಿ ಪರಿಶೀಲಿಸಿ ಇದನ್ನು ಹಕ್ಕುಬಾಧ್ಯತೆಯ ಸಮಿತಿಗೆ ಕಳುಹಿಸಿಕೊಡಬೇಕು, ಕೊಡುವುದಕ್ಕೆ ಇದು ಬಹಳ ಅರ್ಹವಾದ ವಿಷಯ. ಇದು ಒಂದನ್ನು ವಿಚಾರಣೆಗೆ ಗುರಿಪಡಿಸಿದರೆ ಇದರಿಂದ ಎಷ್ಟೋ ವಿಷಯಗಳು ಸರಿಹೋಗುತ್ತವೆ ಎಂದು ಭಾವಿಸುತ್ತೇನೆ. ಇದನ್ನು ತಾವು ದಯವಿಟ್ಟು ಮಾಡಿಕೊಡಬೇಕು.

Mr. DEPUTY SPEAKER.—I will examine the proceedings and consider the matter. It will be taken up during the course of the day.

ಶ್ರೀ ಎನ್. ಶಿವಪ್ಪ.—ಇವತ್ತೇ ಈ ವಿಚಾರದಲ್ಲ ತಾವು ಏನು ತೀರ್ಮಾನಕೊಡುತ್ತೀರಿ ಎಂಬುದನ್ನು ಹೇಳಿಬಿಡಿ.

ಉಪಾಧ್ಯಕ್ಷರು.—ಅದಕ್ಕೆ ಸ್ವಲ್ಪ ಕಾರಾವಕಾಶಬೇಡವೇ!

ಶ್ರೀ ಎಚ್. ಎನ್. ನಂಜೇಗೌಡ.—ನನ್ನ ಒಂದು ಕ್ರಿಯಾಲೋಪವಿದೆ. ಹಕ್ಕಿನ ಚ್ಯುತಿಗೆ ತಂದಂತಹ ನೋಡನೆಯ ಮೇಲೆ ಮಾತನಾಡುವಾಗ ರೆಕಾರ್ಡ್ ನೋಡುತ್ತೇನೆ ಎಂದು ತಾವು ಹೇಳುತ್ತಾ ಇದ್ದೀರಿ. ಇದಕ್ಕೆ ಸಂಬಂಧಪಟ್ಟ ಉಪಮಂತ್ರಿಗಳು ಗುಂಡುಕಲ್ಲಿನ ಹಾಗೆ ಇರ್ದ್ಲೇ

(ಶ್ರೀ ಎಚ್. ಎನ್. ನಂಜೇಗೌಡ)

ಕುಳಿತಿದ್ದಾರೆ, ಸಭೆಯಲ್ಲಿ ಏನು ನಡೆಯುತ್ತಾ ಇದೆ ಎಂಬುದನ್ನು ಗಮನಿಸುತ್ತಾ ಇದ್ದಾರೆ. ಆ ರೀತಿ ಹೇಳದಿದ್ದರೆ ಹಾಗೆ ಹೇಳಲಿಲ್ಲ ಅಂತ ಹೇಳುವುದಕ್ಕೆ ಅವರಿಗೆ ಈ ಸಭೆಯಲ್ಲಿ ಅವಕಾಶವಿದ್ದೇ ಇರುತ್ತದೆ. ಇದನ್ನೆಲ್ಲಾ ಅವರು ನಮ್ಮನೆ ಕೇಳಿಕೊಂಡು ಕುಳಿತಿರುವುದನ್ನು ನೋಡಿದರೆ ಅವರು ತಾವು ಹೇಳಿದ್ದನ್ನು ಪರೋಕ್ಷವಾಗಿ ಒಪ್ಪಿಕೊಂಡಂತೆ ಆಯಿತು. ನೇರವಾಗಿ ಇದು ಸಾಬೀತಾಗಿರುವುದರಿಂದ ನನ್ನಮಟ್ಟಿಗೆ ಹೇಳುವುದಾದರೆ ಅವರು ಇದನ್ನು ನಿರಾಕರಿಸದೇ ಇರುವುದರಿಂದ ತಾವು ಇದರ ಬಗ್ಗೆ ತಮ್ಮ ಕನ್‌ಸಿಡರ್ಡ್ ರೂಲಿಂಗ್ ಕೊಡುತ್ತೇನೆ ಎಂದು ಹೇಳುವುದಕ್ಕೆ ಹೋಗದೆ ನೇರವಾಗಿ ಇದನ್ನು ಹಕ್ಕುಬಾಧ್ಯತೆಯ ನಮಿತಿಗೆ ಕಳುಹಿಸಬೇಕೆಂದು ಹೇಳುತ್ತೇನೆ. ಇಂಥ ಜವಾಬ್ದಾರಿ ರಹಿತವಾದ ಹೇಳಿಕೆಗಳನ್ನು ಕೊನೆಗಾಣಬೇಕು. ಇದನ್ನು ತಾವು ನಡೆಸಿಕೊಡಬೇಕು. ಇದು ನನ್ನ ಪಾಯಿಂಟಾಫ್ ಆರ್ಡರ್.

ಉಪಾಧ್ಯಕ್ಷರು.—ನಾನು ಆ ರೀತಿ ಯಾವುದನ್ನೂ ಕಡೆಗಾಣಿಸಿ ನೋಡಿಲ್ಲ. ಮೊನ್ನೆಯ ದಿನ ಒಂದು ಪ್ರಿವಿಲೇಜ್ ಮೋಷನ್ ಬಂದಿತ್ತು. ಅದರ ಬಗ್ಗೆ ಕನ್‌ಸರ್ಪ್‌ಮಾಡಿ.....

ಶ್ರೀ ಎಚ್. ಎನ್. ನಂಜೇಗೌಡ.—ಇಲ್ಲಿ ಆ ಪ್ರಿವಿಲೇಜ್ ಮೋಷನ್ ಬಂದು ಚರ್ಚೆಯಾಗಿದೆ, ತಾವು ರೆಕಾರ್ಡ್‌ನ್ನು ತೆಗೆಸಿನೋಡಿರಿ. ಪರಿಶೀಲನೆ ಮಾಡಿ. ಅಧ್ಯಕ್ಷರು ಇಲ್ಲಿ ಇನ್ನೊಬ್ಬರನ್ನು ರಕ್ಷಿಸುವುದಕ್ಕೆ ಪ್ರಯತ್ನಮಾಡಬಾರದು. ನಮ್ಮ ಹಕ್ಕನ್ನೂ ಉಳಿಸುವುದಕ್ಕೆ ತಾವು ಪ್ರಯತ್ನಮಾಡಿ.

Sri AZEEZ SAIT.—The House is seized of the matter. On the consensus of the House, the privilege motion may be taken up very seriously. If for any better reasons known to you, if the matter is to be shelved, it is open to the member concerned to refute or say something. You can call upon the hon. Member to have his say. It is a very serious matter.

ಉಪಾಧ್ಯಕ್ಷರು.—ನಾನು ಯಾರನ್ನು ಉಳಿಸಬೇಕೆಂದು ಪ್ರಯತ್ನಮಾಡಲಿಲ್ಲ. ತಕ್ಷಣ ಇದನ್ನು ತೀರ್ಮಾನಮಾಡಬೇಕೆಂದೂ ಹೇಳಲಿಲ್ಲ. ಪರಿಶೀಲನೆ ಮಾಡಿ ಎಂದು ಮಾನ್ಯ ಶಿವಪ್ಪನವರೂ ಹೇಳಿದ್ದಾರೆ.....

ಶ್ರೀ ಅಜೀಜ್ ಸೇಟ್.—ತಾವು ಕುಳಿತಿರತಕ್ಕ ಕುರ್ಚಿ ಬಹಳ ಪವಿತ್ರವಾದದ್ದು. ತಾವು ಯಾವಾಗ್ಲೂ "ಸಿಡೌನ್, ಒಬ್ಬೇ ದಿ ಥೇರ್, ರನ್‌ಹಕ್ಟ್ ದಿ ಚೇರ್" ಈ ಮೂರು ಶಬ್ದಗಳನ್ನು ಬಿಟ್ಟರೆ ಬೇರೆನೂ ಹೇಳುವುದಿಲ್ಲ. There is a serious charge not against an ordinary Member but against an Hon. Deputy Minister who holds a responsible post and who has to behave properly. If such an important motion is ignored, I do not think we will get justice in this House.

Mr. DEPUTY SPEAKER.—Order, order. I request the hon. Member to resume his seat.

ಶ್ರೀ ವಾಟಾಳ್ ನಾಗರಾಜ್.—ಬಹಳ ಜವಾಬ್ದಾರಿಯಿಂದ ಅವರು ನಡೆದುಕೊಳ್ಳುತ್ತಿದ್ದಾರೆಂದು ನಾನು ತಿಳಿದಿದ್ದೇನೆ. ನಾನು ಕೇಳುವಂಥ ಪ್ರಶ್ನೆಗೆ ಜವಾಬ್ದಾರಿಯುತವಾದ ಉತ್ತರ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ಇಂತಹ ಒಂದು ಸಂದರ್ಭದಲ್ಲಿ ಈ ಸಭೆಯಲ್ಲಯೇ ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ ತಕ್ಷಣ ತಾವು ರೂಲಿಂಗ್ ಕೊಟ್ಟಿದ್ದೀರಿ. ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಮಾಗಾವಿಯವರು ಒಂದು ಮಾತನ್ನು ಹೇಳಿದರು ನಾನು ಶ್ರೀ ಗುರೆಡ್ಡಿಯವರ ಮನೆಗೆ ಹೋಗಿ ಭೋಜನ ಮಾಡಿಕೊಂಡು ಬಂದೆ ಎಂದು. ನಮ್ಮ ಮನೆಗೆ ಅವರು ಬರಲಿಲ್ಲ ಎಂಬುದಾಗಿ ನನ್ನ ಸ್ನೇಹಿತರು ಹೇಳಿದರು. ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಇದ್ದಾರೆ. ಇದು ಹಕ್ಕು ಬಾಧ್ಯತೆಗೆ ಸಂಬಂಧಪಟ್ಟ ಪ್ರಶ್ನೆ. ಇದನ್ನು ಹಕ್ಕುಬಾಧ್ಯತೆಗೆ ಹೋಗುವುದಕ್ಕೆ ಅವಕಾಶ ಕೊಡಬೇಕು ಎಂಬುದಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಈಗಾಗಲೇ ಹಲವಾರು ಜನ ಸದಸ್ಯರು ಈ ವಿಷಯದ ಬಗ್ಗೆ ಮಾತನಾಡಿದ್ದಾರೆ. ಈ ವಿಚಾರದಲ್ಲಿ ನಾನು ಅಧ್ಯಕ್ಷರ ಗಮನವನ್ನು ಸೆಳೆಯಲು ಪ್ರಯತ್ನ ಪಟ್ಟಿದ್ದೇನೆ. ರೂಲ್ 179ರ ಪ್ರಕಾರ ಹಕ್ಕುಬಾಧ್ಯತೆ ನಿರ್ಣಯವನ್ನು ನಾವು ತೆಗೆದುಕೊಳ್ಳಬಹುದು.

ತಾವು ಕನ್‌ಸೆಂಟ್ ಕೊಡಬೇಕೆಂಬ ಬಗ್ಗೆ ಮಾನ್ಯ ಶ್ರೀ ಚನ್ನಬಸಪ್ಪನವರು ಸೂಚನೆಯನ್ನು ತಮಗೆ ಕಳುಹಿಸಿದ್ದಾರೆ. ಮಾನ್ಯ ಶ್ರೀ ಗೋಪಾಲಗೌಡರ ಬಗ್ಗೆ ಮೊನ್ನೆ ತಾನೇ ನಡೆದಂಥ ಹಕ್ಕು ಭಾಧ್ಯತೆಯ ಸಂಬಂಧದಲ್ಲಿ ಪಾರ್ಲಿಮೆಂಟ್ ಮಿನಿಸ್ಟರ್ ಪ್ರಿವಿಲೇಜ್ ಮೋಷನ್ನನ್ನು ಇಲ್ಲಿ ಮೂವ್ ಮಾಡಿದಾಗ ತಾವು ಕನ್‌ಸೆಂಟ್ ಕೊಡುವುದಕ್ಕೆ ಮೊದಲೇ ಮಾನ್ಯ ಶ್ರೀ ಗೋಪಾಲಗೌಡರ ಅಭಿಪ್ರಾಯವನ್ನು ಪಡೆದಿರಿ. ಹಾಗೆಯೇ ಮಾನ್ಯ ಶ್ರೀ ಮಾಗಾವಿಯವರು ಏನು ಹೇಳಬೇಕೆನ್ನುವುದನ್ನು ಅವರು ಹೇಳಬಹುದು. ಅದು ಹೋಗಲೇ ಬೇಕೆಂದು ನಂದರ್ಭ ಬಂದಾಗ್ಗೆ ಹೋಗಲೇ ಬೇಕಾಗುತ್ತದೆ. ಇಲ್ಲಿಯೇ ಇದನ್ನು ಬಗೆಹರಿಸಬೇಕಾದರೆ, ಮಾನ್ಯ ಶ್ರೀ ಗೋಪಾಲಗೌಡರಿಗೆ ಅವಕಾಶ ಕೊಟ್ಟಂತೆ ಮಾನ್ಯ ಶ್ರೀ ಮಾಗಾವಿಯವರ ಹೇಳಿಕೆಯನ್ನು ತಾವು ಮೊದಲೇ ಪಡೆಯಬಹುದು. ಆಗ ಯಾವ ಕಾಲದಲ್ಲಾದರೂ ಈ ಪ್ರಿವಿಲೇಜ್ ಮೋಷನ್ನನ್ನು ತೆಗೆದುಕೊಳ್ಳಬಹುದು ಮತ್ತು ಮೂವ್ ಮಾಡಬಹುದು. ರಿಕಾರ್ಡ್ಸ್ ನೋಡಿ ಪ್ರಿವಿಲೇಜ್ ಮೋಷನ್ ಬಗ್ಗೆ ತೀರ್ಮಾನ ಮಾಡಬಹುದು. ಇದಕ್ಕೆ ಪ್ರಾಶಸ್ತ್ಯ ಕೊಡಬೇಕು. ಏಕೆಂದರೆ ಇದು ಹಕ್ಕುಬಾಧ್ಯತೆಯ ಪ್ರಶ್ನೆ. ಆದ್ದರಿಂದ ತಾವು ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ತಮ್ಮ ಒಪ್ಪಿಗೆಯನ್ನು ಕೊಡಬೇಕು. ತಾವು ಕನ್‌ಸೆಂಟ್ ಕೊಡಬೇಕು, ಆಮೇಲೆ ಅದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬಹುದು.

ಉಪಾಧ್ಯಕ್ಷರು.—ಪ್ರೊಸೀಡಿಂಗ್ಸನ್ನು ಈ ದಿವಸವೇ ತಂದು ಅದನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

Bangalore, Karnataka and Mysore Universities Bill, 1969

Motion to consider—(Debate continued)

Sri L. SRIKANTIAH (Nanjangud). Mr. Speaker, resuming what I have stated yesterday, I shall not take much time of the House except adding a few comments here and there.

The object with which the Government is thinking of bringing this amendment, amending section 11, appears to me that there is something more behind it than what appears. The facts are there which indicate that in the Bangalore University for sometime the Vice-Chancellor was absent and somebody was put as officiating Vice-Chancellor. The Government must have, perhaps, smelt a small rat. There is positive evidence to show that the Government is hesitating to probe into the matter. During that interregnum a charge is levelled that about 4 appointments in the Engineering College, 8 appointments in the Central College and 8 appointments in the administration, were proposed. It is one of the specific charges that during this interregnum a grand plan was formed to foist these appointments in the university to the best of their ability and ground was laid to fill these places with persons who are close relatives. Naturally rumours started in the university campus and had its effect in the impressionable minds of the students which are already distrurbed. This information has come to them as a bolt from the blue.

3-30 P.M.

I had an opporutnity to bring to the notice of the Government and the concerned authority, especially the Ministry, the need to probe into